ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 21 ಇಜಿಎಂ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 07/12/2016.

44
21 DEC 2016
HRMS

ಸುತ್ತೋಲೆ

| | |
|---|---|
| ವಿಷಯ: | ಸರ್ಕಾರಿ ಅಧಿಕಾರಿ/ನೌಕರರ ಸೇವಾ ವಿವರಗಳನ್ನು ಮಾನವ ಸಂಪನ್ಮೂಲ ಯೋಜನೆ ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ. |
| ಉಲ್ಲೇಖ: | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 21 ಇಜಿಎಂ 2014, ದಿನಾಂಕ:04/09/2014. |

******************

ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಮಾನವ ಸಂಪನ್ಮೂಲ ಯೋಜನೆ ತಂತ್ರಾಂಶವನ್ನು ಉನ್ನತೀಕರಿಸಲು ಮಂಜೂರಾತಿ ನೀಡಲಾಗಿದೆ. ಈ ಉನ್ನತೀಕರಿಸಿದ ತಂತ್ರಾಂಶವು ಸೇವಾ ಮತ್ತು ವೇತನ ಸಂಬಂಧಿತ ನಿಯಮಗಳನ್ನು ಪೂರ್ಣವಾಗಿ ಒಳಗೊಂಡಿರುತ್ತದೆ. ಸಂಬಂಧವಿರುವ ಯಾವುದೇ ಮಾಹಿತಿ ಒಂದಕ್ಕೊಂದು ತಾಳೆ ಹೊಂದುವುದು ಅತಿ ಮುಖ್ಯವಾಗಿರುತ್ತದೆ. (ಉ.ದಾ. ಯಾವುದೇ ಅಧಿಕಾರಿ/ನೌಕರರಿಗೆ ಮುಂಬಡ್ತಿ ದಾಖಲಿಸುವ ಸಂದರ್ಭದಲ್ಲಿ ಸಂಬಂಧಿತ ಅಧಿಕಾರಿ/ನೌಕರರ ಖಾಯಂ ಪೂರ್ವ ಸೇವಾವಧಿ ಯಶಸ್ವಿಯಾಗಿ ಪೂರ್ಣಗೊಂಡಿರುವ ಮಾಹಿತಿ ದಾಖಲಾಗಿರಬೇಕು, 20 ವರ್ಷದ ಕಾಲಾವಧಿ ಹೆಚ್ಚುವರಿ ವೇತನ ಮುಂಬಡ್ತಿ ಸಂದರ್ಭದಲ್ಲಿ 10 ವರ್ಷದ ಮತ್ತು 15 ವರ್ಷದ ಕಾಲಬದ್ಧ ಮುಂಬಡ್ತಿ ದಾಖಲಾಗಿರಬೇಕು ಇತ್ಯಾದಿ) ಒಟ್ಟಾರೆ ಸೇವಾ ಪುಸ್ತಕದಲ್ಲಿರುವಂತೆ ಎಲ್ಲಾ ಮಾಹಿತಿಯು ಮಾನವ ಸಂಪನ್ಮೂಲ ಯೋಜನೆಯಲ್ಲಿ ದಾಖಲಾಗಿರಬೇಕು. ಹೀಗೆ ಪೂರ್ಣವಾಗಿ ದಾಖಲಾಗದ ಸಂದರ್ಭಗಳಲ್ಲಿ ಉನ್ನತೀಕರಿಸಿದ ತಂತ್ರಾಂಶದಲ್ಲಿ ವೇತನ ಬಿಲ್ ಜನರೇಟ್ ಆಗದೆ ಇರಬಹುದು. ಈಗಾಗಲೇ ಎಲ್ಲಾ ಅಧಿಕಾರಿ/ನೌಕರರ ಸೇವಾ ವಿವರಗಳನ್ನು ಮಾನವ ಸಂಪನ್ಮೂಲ ಯೋಜನೆಯಲ್ಲಿ ದಾಖಲಿಸಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಇ-ಆಡಳಿತ ಇಲಾಖೆಯು ಈ ಬಗ್ಗೆ 2009 ರಿಂದಲೂ ಇದನ್ನು ದಾಖಲಿಸಲು ಹಲವಾರು ಪತ್ರ ಮುಖೇನ ಸೂಚಿಸುತ್ತಾ ಬಂದಿದೆ.

ಉನ್ನತೀಕರಿಸಿದ ತಂತ್ರಾಂಶವನ್ನು ಜನವರಿ 2017 ರಿಂದ ಜಾರಿಗೆ ತರಲು ನಿರ್ಧರಿಸಲಾಗಿದೆ. ಆ ಕಾರಣ ಮಾನವ ಸಂಪನ್ಮೂಲ ಯೋಜನೆಯಲ್ಲಿ ಪೂರ್ಣ ಮಾಹಿತಿಯನ್ನು ಅಳವಡಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಅವರ ಅಧೀನದಲ್ಲಿರುವ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಆದೇಶಿಸಲು ಕೋರಿದೆ. ಈ ಕಾರ್ಯವು ಡಿಸೆಂಬರ್ 2016 ರೊಳಗೆ ಪೂರ್ಣಗೊಳಿಸಬೇಕು. ಒಂದು ವೇಳೆ ಯಾವುದೇ ಬಟವಾಡೆ ಅಧಿಕಾರಿಯು ವಿಳಂಬ ಮಾಡಿದಲ್ಲಿ ಅಂತಹವರ ಡಿಸೆಂಬರ್ 2016 ಮತ್ತು ತದನಂತರ ವೇತನವು ಜನರೇಟ್ ಆಗದೇ ಇರಬಹುದು. ಇದಕ್ಕೆ ಅವಕಾಶ ನೀಡದೇ ತಕ್ಷಣ ಕಾರ್ಯಪ್ರವೃತ್ತರಾಗಲು ಸಂಬಂಧಿತ ಎಲ್ಲಾ ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳ ಗಮನಕ್ಕೆ ತರಲು ಕೋರಲಾಗಿದೆ.

HRMS 2.0 ತಂತ್ರಾಂಶದಲ್ಲಿ ವರ್ಕ್ ಫ್ಲೋ (work flow) ಮೂಲಕ ಪ್ರತಿಯೊಬ್ಬ ನೌಕರರು ಅಗತ್ಯವಿರುವ ರಜೆ, ವಿವಿಧ ಸಾಲ, ಮುಂಗಡ ಇತ್ಯಾದಿ ಸೇವೆಗಳನ್ನು ಪಡೆಯಲು, ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿ ಅನುಮೋದನೆ ಪಡೆಯುವ ಸೌಲಭ್ಯವನ್ನು ಕೂಡ ತರಲಾಗುತ್ತಿದೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಬಹಳಷ್ಟು ನೌಕರರ ಸೇವಾ ವಿವರಗಳು (ಆಧಾರ್, ಮೊಬೈಲ್ ಸಂಖ್ಯೆ ಒಳಗೊಂಡಂತೆ) ಮತ್ತು ಕುಟುಂಬದ ಅವಲಂಬಿತ ಸದಸ್ಯರುಗಳ ವಿವರಗಳು ಹೆಚ್.ಆರ್.ಎಂ.ಎಸ್ ನಲ್ಲಿ ಅಳವಡಿಸಿಲ್ಲದಿರುವುದರಿಂದ ಹೆಚ್.ಆರ್.ಎಂ.ಎಸ್ -2 ಅನ್ನು ಜಾರಿಗೊಳಿಸಲು ವಿಳಂಬವಾಗುತ್ತಿದೆ. ಇದಲ್ಲದೆ ಈ ಸೇವೆಗಳನ್ನು ಪಡೆಯಲು ಪ್ರತಿಯೊಬ್ಬ ಅಧಿಕಾರಿ/ನೌಕರರ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಮಾನವ ಸಂಪನ್ಮೂಲ ಯೋಜನೆಯಲ್ಲಿ ಅಳವಡಿಸುವುದು ಕೂಡ ಅತಿ ಮುಖ್ಯವಾಗಿದೆ.

ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳು/ಇಲಾಖಾ ಮುಖ್ಯಸ್ಥರು ತಮ್ಮ ಅಧೀನದಲ್ಲಿರುವ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಅವರ ಅಧೀನದಲ್ಲಿರುವ ಎಲ್ಲಾ ಸರ್ಕಾರಿ ಅಧಿಕಾರಿ/ನೌಕರರ ಸೇವಾ ವಿವರಗಳು, (ಆಧಾರ್, ಮೊಬೈಲ್ ದೂರವಾಣಿ ಸಂಖ್ಯೆಯನ್ನು ಒಳಗೊಂಡಂತೆ) ಮತ್ತು ಕುಟುಂಬದ ಅವಲಂಬಿತ ಸದಸ್ಯರುಗಳ ಮಾಹಿತಿಯನ್ನು ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ಡಿಸೆಂಬರ್ 2016 ಒಳಗೆ ಅಳವಡಿಸುವಂತೆ ನಿರ್ದೇಶಿಸಲು ಕೋರಿದೆ.

(ವಿ.ಮಂಜುಳ).
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿ ಮತ್ತು ಆಸು ಇಲಾಖೆ(ಇ-ಆಡಳಿತ).

ಇವರಿಗೆ,

ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಯವರು/ಕಾರ್ಯದರ್ಶಿ/ಇಲಾಖಾ ಮುಖ್ಯಸ್ಥರು.

ಪ್ರತಿ: ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ ಇವರಿಗೆ.

ಸಂ: ಕಾಶಿಇ/ಮಾತಂವಿ/13/ಹೆಚ್‌ಆರ್‌ಎಂಎಸ್/2015-16.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು. ದಿನಾಂಕ:22/12/2016.

ಸರ್ಕಾರದ ಸುತ್ತೋಲೆ ಸಂ: ಸಿಆಸುಇ 21 ಇಜಿಎಂ 2014, ದಿನಾಂಕ:07/12/2016 ಅನ್ನು ಇಲಾಖಾವ್ಯಾಪ್ತಿಯ ಎಲ್ಲಾ ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳಿಗೆ ಪರಿಚಲಿಸುತ್ತಾ ಸರ್ಕಾರದ ಸುತ್ತೋಲೆಯ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ

1. ಎಲ್ಲಾ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ – ಸೂಕ್ತಕ್ರಮಕ್ಕಾಗಿ
2. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಸೂಕ್ತ ಕ್ರಮಕ್ಕಾಗಿ
3. ಲೆಕ್ಕಾಧಿಕಾರಿಗಳು, ಕಾಲೇಜು ಶಿಕ್ಷಣ ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು

1. ಕಾಲೇಜು ಶಿಕ್ಷಣ ಆಯುಕ್ತರ ಆಪ್ತಶಾಖೆಗೆ – ಮಾಹಿತಿಗಾಗಿ.
2. ಕಾಲೇಜು ಶಿಕ್ಷಣ ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ ಆಪ್ತಶಾಖೆಗೆ –ಮಾಹಿತಿಗಾಗಿ.
3. ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.